# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ.

ಉಪಸ್ಥಿತರು: ಮೀರ್ ಅನೀಸ್ ಅಹಮದ್ ಭಾ.ಆ.ಸೇ.,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ರೆ.ಅ/18/2014-15 ದಿನಾಂಕ: 30-05-2016

| ಮೇಲ್ಮನವಿದಾರರು | ಪ್ರತಿವಾದಿಗಳು |
|---|---|
| ಶ್ರೀ ಕೆ.ಎಂ. ಮಕ್ಬೂಲ್,<br>ಬಿನ್. ಶೇಖ್ ಮೊಹಮೂದ್,<br>ನಂ:56, ಶೇಷಾದ್ರಿ ರಸ್ತೆ,<br>4ನೇ ಕ್ರಾಸ್,<br>ಮಾರಪ್ಪ ಗಾರ್ಡನ್,<br>ಬೆಂಗಳೂರು. | 1. ಶ್ರೀ ಕೆ.ಎ. ಶಫೀಕ್ ಅಹಮ್ಮದ್,<br>ಬಿನ್. ಅಬ್ದುಲ್ ರೆಹಮಾನ್,<br>ನಂ:202, ಐ.ಬಿ. ರಸ್ತೆ,<br>ಕುಶಾಲನಗರ.<br>2. ತಹಶೀಲ್ದಾರ್,<br>ಸೋಮವಾರಪೇಟೆ ತಾಲ್ಲೂಕು,<br>ಸೋಮವಾರಪೇಟೆ.<br>3. ಉಪ ವಿಭಾಗಾಧಿಕಾರಿ,<br>ಮಡಿಕೇರಿ ಉಪ ವಿಭಾಗ,<br>ಮಡಿಕೇರಿ. |

---

ದಾವಾ ಜಮೀನು: ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 78/15 ಮತ್ತು ಸ.ನಂ. 90/15 ರ ಜಾಗ.

*-*-*-*

**ಪ್ರಸ್ತಾವನೆ:**

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 136 (3)ರಡಿ ಸಲ್ಲಿಸಿ 3ನೇ ಪ್ರತಿವಾದಿಗಳ ಆದೇಶ ಸಂ:ರೆ.ಅ./423/2012-13, ದಿನಾಂಕ:04-03-2014ನ್ನು ಪ್ರಶ್ನಿಸಿರುತ್ತಾರೆ.

ಸದರಿ ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ಉಭಯ ಪಾರ್ಟಿಗಳಿಗೆ ನೋಟೀಸ್ ನೀಡಿ ವಾದ ಮಂಡನೆಗೆ ಸಾಕಷ್ಟು ಕಾಲಾವಕಾಶ ಕೊಟ್ಟು ವಿಚಾರಣೆ ನಡೆಸಲಾಯಿತು.

ಮೇಲ್ಮನವಿದಾರರು ಮೇಲ್ಮನವಿಯಲ್ಲಿ ಮತ್ತು ದಿನಾಂಕ:16-05-2016ರಂದು ಮಂಡಿಸಿದ ಮೌಖಿಕ ವಾದದಲ್ಲಿನ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

1) ಒಂದನೇ ಪ್ರತಿವಾದಿಗಳು ಮೇಲ್ಮನವಿದಾರರ ಅಣ್ಣನ ಮಗನಾಗಿರುತ್ತಾರೆ. ಮೇಲ್ಮನವಿದಾರರ ಅಜ್ಜಿ ಬೀಬಿಯಮ್ಮ ನವರು ಕುಶಾಲನಗರ ಪಟ್ಟಣದ 4ನೇ ಬ್ಲಾಕ್ ಸ.ನಂ. 78/15 ಮತ್ತು 90/15ರ ಜಾಗವನ್ನು ದಿನಾಂಕ:16-05-1962ರ ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ.

ಸದರಿ ಬೀಬಿಯಮ್ಮನವರು ಸದರಿ ಜಾಗವನ್ನು ನೋಂದಾಯಿತ ವ್ಯವಸ್ಥ ಪತ್ರ ದಿನಾಂಕ: 21-12-1970ರ ಮೂಲಕ ಮೇಲ್ಮನವಿದಾರರಿಗೆ ನೀಡಿರುತ್ತಾರೆ.

2) ಮೇಲ್ಮನವಿದಾರರು ಸರ್ಕಾರಿ ಉದ್ಯೋಗದಲ್ಲಿದ್ದು ಮೇಲೆ ಕಾಣಿಸಿದ ಜಾಗಗಳನ್ನು 1ನೇ ಪ್ರತಿವಾದಿಗಳಿಗೆ ವಹಿಸಿದ್ದರು. 1ನೇ ಪ್ರತಿವಾದಿಗಳು ಸದರಿ ಜಾಗದ ಉಸ್ತುವಾರಿಯನ್ನು ನೋಡಿಕೊಂಡಿದ್ದರು ಹಾಗೂ ಅಲ್ಲಿಯ ಉತ್ಪಾದನೆಗಳನ್ನು ತಾವೇ ಅನುಭವಿಸಿಕೊಂಡಿದ್ದರು. ಈ ಎಲ್ಲಾ ವಾಸ್ತವಾಂಶಗಳನ್ನು ಮರೆಮಾಚಿ ಹಾಗೂ ತಪ್ಪು ಮಾಹಿತಿಗಳನ್ನು ನೀಡಿ 1ನೇ ಪ್ರತಿವಾದಿಗಳು ಸದರಿ ಜಾಗದಲ್ಲಿರುವ ಮನೆಯನ್ನು ತನ್ನ ಹೆಸರಿಗೆ 2ನೇ ಪ್ರತಿವಾದಿಗಳ ಕೈಯಿಂದ ಮಂಜೂರಾತಿ ಮಾಡಿಕೊಂಡಿರುತ್ತಾರೆ. ಈ ವಿಚಾರವು 2003ರಲ್ಲಿ ಮೇಲ್ಮನವಿದಾರರ ಗಮನಕ್ಕೆ ಬಂದಿದ್ದು 2ನೇ ಪ್ರತಿವಾದಿಗಳಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

3) 2ನೇ ಪ್ರತಿವಾದಿಗಳು ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ತನ್ನ ಕಚೇರಿಯಲ್ಲಿ ಕಡತವು ಲಭ್ಯವಿಲ್ಲದ ಕಾರಣ ನಿವೇಶನ/ ಜಾಗ ಮಂಜೂರಾತಿಗೆ ತನಗೆ ಅಧಿಕಾರವಿಲ್ಲದೆ ಇರುವುದರಿಂದ ಮೇಲ್ಮನವಿದಾರರ ಆಕ್ಷೇಪಣೆ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ.

4) ಮೇಲ್ಮನವಿದಾರರು ಮೇಲ್ಕಾಣಿಸಿದ ಜಮೀನಿಗೆ ಸಂಬಂಧಿಸಿದ ಕಡತದ ದೃಢೀಕೃತ ಪ್ರತಿಯನ್ನು 2ನೇ ಪ್ರತಿವಾದಿಗಳಲ್ಲಿ ಕೋರಿದ್ದು, ಕಡತ ಲಭ್ಯವಿಲ್ಲವೆಂದು ಅವರು ಹಿಂಬರಹ ನೀಡಿರುತ್ತಾರೆ. ಈ ಕುರಿತು ಮೇಲ್ಮನವಿದಾರರು 3ನೇ ಪ್ರತಿವಾದಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಂ:423/2012-13ದಾಖಲಿಸಿರುತ್ತಾರೆ.

5) 3ನೇ ಪ್ರತಿವಾದಿಗಳು ತಮ್ಮ ದಿನಾಂಕ:04-03-2014ರ ಆದೇಶದ ಪ್ರಕಾರ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ. 3ನೇ ಪ್ರತಿವಾದಿಗಳು ತಮ್ಮ ಆದೇಶದಲ್ಲಿ ಯಾವ ಕಾರಣದಿಂದಾಗಿ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ಸಕರಾತ್ಮಕವಾಗಿ ಮಾಹಿತಿ ನೀಡಿರುವುದಿಲ್ಲ. ಸದರಿ ಆದೇಶವು ಕಾನೂನಿಗೆ ವಿರುದ್ಧವಾಗಿರುತ್ತದೆ.

6) ಬೀಬಿಯಮ್ಮನವರಿಂದ ಮೇಲ್ಮನವಿದಾರರು ಪಡೆದಿರುವ ಜಾಗವು ಹಾಗೂ 1ನೇ ಪ್ರತಿವಾದಿಗಳು ಮಂಜೂರು ಮಾಡಿಸಿಕೊಂಡಿರುವಂತಹ ಜಾಗವು ಒಂದೇ ಜಾಗವಾಗಿರುವುದು ಎಂದು ಹೇಳಲು ಕಡತದಲ್ಲಿ ಸಾಕಷ್ಟು ದಾಖಲೆಗಳು ಇದ್ದಾಗ್ಯೂ 3ನೇ ಪ್ರತಿವಾದಿಗಳು ದಾಖಲೆಗಳು ಇಲ್ಲಾ ಎಂದು ಹೇಳಿರುವುದು ವಿಪರ್ಯಾಸ. ಸರ್ಕಾರಿ ದಾಖಲೆಗಳೆ ಸದರಿ ವಿಷಯಗಳನ್ನು ಬಲಪಡಿಸುತ್ತದೆ.

7) ಮೇಲ್ಕಾಣಿಸಿದ ಆಸ್ತಿಗಳು ಯಾವತ್ತು ಸರ್ಕಾರಿ ಆಸ್ತಿಗಳಾಗಿರಲಿಲ್ಲ. ಮೇಲ್ಕಾಣಿಸಿದ ಬೀಬಿಯಮ್ಮನವರಿಗೆ ಸೇರಿದ್ದ ಆಸ್ತಿಗಳಾಗಿರುತ್ತದೆ. ಸೋಮವಾರಪೇಟೆ ನ್ಯಾಯಾಲಯದಲ್ಲಿರುವ ಓ.ಎಸ್. ನಂ:134/2010ರ ಪ್ರಕರಣಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ.

8) ದಾವಾ ಆಸ್ತಿಗಳ ಬಗ್ಗೆ ವಿವಾದವನ್ನು ಸೃಷ್ಟಿಸಿದವರು 1ನೇ ಪ್ರತಿವಾದಿಗಳು ಅವರು ತಮಗೆ ಸ್ವತ್ತು ಮಂಜೂರಾಗಿದೆ ಎಂದು ಹೇಳಿರುವ ಕಾರಣ ಈ ವಿವಾದ ಉದ್ಭವವಾಗಿದೆ ಎಂಬುದನ್ನು 3ನೇ ಪ್ರತಿವಾದಿಗಳು ಪರಿಗಣಿಸಿಲ್ಲ.

9) ಕಂದಾಯ ಇಲಾಖೆ ಕಾನೂನಿನಂತೆ ಸರ್ಕಾರದ ಯಾವ ಅಧಿಕಾರಿಗಳಿಗೆ ಖಾಸಗಿ ಸ್ವತ್ತನ್ನಾಗಲೀ ಅಥವಾ ಭಾಗವನ್ನಾಗಲಿ ಬೇರೆಯವರಿಗೆ ಮಂಜೂರು ಮಾಡುವ ಅಧಿಕಾರವಿರುವುದಿಲ್ಲ. ಸರ್ಕಾರಿ ಭೂಮಿಯನ್ನು ಸೂಕ್ತ ಪರಿಶೀಲನೆಯ ನಂತರವಷ್ಟೆ ಬೇರೆಯವರಿಗೆ ಮಂಜೂರು ಮಾಡಬಹುದು. ಸರ್ಕಾರಿ ಭೂಮಿಯನ್ನು ಮಂಜೂರು ಮಾಡಬೇಕಾದರೆ ಕಾನೂನಿನ ಅನ್ವಯ ಅನೇಕ ನಿಯಮಗಳನ್ನು ಪಾಲಿಸಬೇಕಾಗುತ್ತದೆ. 2ನೇ ಪ್ರತಿವಾದಿಗಳ ಕಚೇರಿಯಲ್ಲಿ ಯಾವುದೇ ಮೂಲ ಕಡತ ಲಭ್ಯವಿಲ್ಲವೆಂದು ಮಂಜೂರಾತಿಯನ್ನು 1ನೇ ಪ್ರತಿವಾದಿಗಳಿಗೆ ಮಾಡುವುದಕ್ಕೆ ತಮಗೆ ಯಾವುದೇ ಅಧಿಕಾರವಿರುವುದಿಲ್ಲವೆಂದು ಅವರ ಹೇಳಿಕೆ ನೀಡಿರುವುದನ್ನು 3ನೇ ಪ್ರತಿವಾದಿಗಳ ಆದೇಶದ 2ನೇ ಘಟದ 5ನೇ ಕಂಡಿಕೆಯಲ್ಲಿ ನಮೂದಿಸಿದ್ದಾರೆ. ಇದನ್ನು ಗಮನಿಸಿದಾಗ 1ನೇ ಪ್ರತಿವಾದಿಗಳು ಯಾವುದೇ ಸ್ವತ್ತಿನ ಮಂಜೂರು ಪಡೆದಿರುವುದಕ್ಕೆ ಯಾವ ಆಧಾರವು ಇರುವುದಿಲ್ಲ ಮತ್ತು ಅವರು

ದಾಖಲೆ ಮಾಡಿರುವ ಆದೇಶಗಳು ಸೃಷ್ಠಿಮಾಡಿಕೊಂಡದ್ದಾಗಿರುತ್ತವೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ.

10) ಮೇಲ್ಮನವಿದಾರರು ತನ್ನ ತಾಯಿಯವರಾದ ಬೀಬಿಯಮ್ಮ ನವರಿಗೆ ಸ್ವತ್ತು ನೋಂದಾಯಿತ ಪತ್ರದ ಮೂಲಕ ಕ್ರಮವಾಗಿ ಬಂದ ಮೇಲೆ ಕಂದಾಯ ಇಲಾಖೆಯಲ್ಲಿ ಅದೆಲ್ಲವನ್ನು ಪರಿಶೀಲಿಸಿ ಮೇಲ್ಮನವಿದಾರರ ತಾಯಿಯವರ ಹೆಸರಿಗೆ ಖಾತೆ ಬದಲಾಯಿಸಿರುವುದು. ಮೇಲ್ಮನವಿದಾರರು ಕಂದಾಯವನ್ನು ಪಾವತಿ ಮಾಡಿಕೊಂಡಿರುವುದು. ಮೇಲ್ಮನವಿದಾರರ ತಾಯಿ ದಿನಾಂಕ: 21-12-1970ರಲ್ಲಿ ನೋಂದಾಯಿತ ವ್ಯವಸ್ಥಾ ಪತ್ರವನ್ನು ಬರೆದುಕೊಟ್ಟ ಮೇಲೆ ಮೇಲ್ಮನವಿದಾರರ ಹೆಸರಿಗೆ ಖಾತೆ ಬದಲಾವಣೆಯಾಗಿದ್ದು, ಕಂದಾಯ ಇಲಾಖೆಗೆ ಕಂದಾಯವನ್ನು ಸಂದಾಯ ಮಾಡುತ್ತಿರುತ್ತಾರೆ. 1ನೇ ಪ್ರತಿವಾದಿಗಳಿಗೆ ಮಂಜೂರಾತಿ ಮಾಡಲಾಗಿದೆ ಎಂಬ ದಾಖಲೆ 2001ನೇ ಇಸವಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಮೇಲ್ಮನವಿದಾರರು 30 ವರ್ಷಗಳಿಗೂ ಅಧಿಕ ಸದರಿ ಸ್ವತ್ತಿನ ಖಾತೆದಾರರೆಂದು ಕಂದಾಯ ಪಾವತಿ ಮಾಡುತ್ತಿದ್ದು, ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿದ್ದರೂ ಸಹ ಸದರಿ ಸ್ವತ್ತು ಖಾಸಗಿ ಸ್ವತ್ತು ಎಂಬ ಬಗ್ಗೆ ದಾಖಲೆ ಹಾಜರು ಮಾಡಿಲ್ಲವೆಂದು 3ನೇ ಪ್ರತಿವಾದಿಗಳು ತಮ್ಮ ಆದೇಶದಲ್ಲಿ ಉಲ್ಲೇಖಿಸಿರುವುದು ದೋಷಪೂರಿತವಾದಂತಹುದಾಗಿರುತ್ತದೆ. ಮೇಲ್ಕಂಡ ಎಲ್ಲಾ ಸಕಾರಣದಿಂದ ಮೇಲ್ಮನವಿಯು ಪುರಸ್ಕಾರಕ್ಕೆ ಯೋಗ್ಯವಾಗಿರುತ್ತದೆ.

ಆದುದರಿಂದ 3ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವನ್ನು ಬದಿಗೊತ್ತಿ ಮೇಲ್ಮನವಿಯನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

1ನೇ ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿ ಮಂಡಿಸಿದ ಮೌಖಿಕವಾದದ ಪ್ರಮುಖ ಅಂಶಗಳು ಈ ಕೆಳಗಿನಂತಿದೆ.

1) ತಾನು ಮೇಲ್ಮನವಿದಾರರ ಅಣ್ಣನ ಮಗನಾಗಿದ್ದು, ದಾವಾ ಜಮೀನಿನ ಅನುಭವ ಸ್ವಾಧೀನದಲ್ಲಿರುತ್ತೇನೆ. ಸದರಿ ಜಮೀನನ್ನು ತನಗೆ ಸೋಮವಾರಪೇಟೆ ತಾಲ್ಲೂಕು ತಹಶೀಲ್ದಾರರಿಂದ ಅಕ್ರಮ-ಸಕ್ರಮದಡಿ ನಿವೇಶನವಾಗಿ ಮಂಜೂರಾಗಿದ್ದು, ಇದಕ್ಕೆ ಸ.ನಂ. 83/1ಪಿ1 ಎಂದು ನೀಡಲಾಗಿದೆ.
2) ಮೇಲ್ಮನವಿದಾರರು ತಾನು ತಂದೆಗೆ ಒಬ್ಬನೇ ಮಗನೆಂದು ಸುಳ್ಳು ಮಾಹಿತಿ ನೀಡಿ, ಜಾಗದ ಖಾತೆ ವರ್ಗಾವಣೆ ಮಾಡಿಸಿಕೊಂಡಿದ್ದು, ದಾಖಲೆಗಳನ್ನು ಪೋರ್ಜರಿ ಮಾಡಿರುತ್ತಾರೆ. ದಾವಾ ಜಮೀನು ತನ್ನ ಅಜ್ಜಿ ಬೀಬಿಯಮ್ಮನವರಿಗೆ ಸೇರಿದ್ದು, ಸದರಿ ಜಮೀನಿನ ಹಕ್ಕಿನ ಬಗ್ಗೆ ಸೋಮವಾರಪೇಟೆಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ:134/2010ರಂತೆ ದಾವೆ ನಡೆಯುತ್ತಿದ್ದು, ಇತ್ಯರ್ಥಕ್ಕೆ ಬಾಕಿ ಇರುತ್ತದೆ.
3) ತನಗೆ ಮಂಜೂರಾಗಿರುವ ಜಾಗವು ಮುಳ್ಳುಸೋಗೆ ಗ್ರಾಮದ ಸ.ನಂ. 83/1ಪಿ1 ರಲ್ಲಿದ್ದು, ಈ ಜಾಗ ಮತ್ತು ದಾವಾ ಜಮೀನು ಒಂದೇ ಆಗಿರುವುದಿಲ್ಲ.
4) ಮೇಲ್ಮನವಿದಾರರು ದಿನಾಂಕ:21-12-1970ರ ವ್ಯವಸ್ಥಾ ಪತ್ರದಲ್ಲಿ ತೋರಿಸಲಾದ ಜಮೀನನ್ನು ಪ್ರಸ್ತಾಪಿಸಿ ತನಗೆ ಮಂಜೂರಾದ ಜಾಗದೊಂದಿಗೆ ತಳುಕು ಹಾಕಿಕೊಂಡು ಗೊಂದಲ ಸೃಷ್ಠಿ ಮಾಡಿರುತ್ತಾರೆ.
5) ಮೇಲ್ಮನವಿಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾಗಿರುವುದರಿಂದ ಮೇಲ್ಮನವಿಯನ್ನು ವಜಾಗೊಳಿಸಲು ಕೋರಲಾಗಿದೆ.

ವಾದ, ಪ್ರತಿವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ದಾವಾ ಜಮೀನು ದಿನಾಂಕ:21-12-1970ರ ವ್ಯವಸ್ಥಾ ಪತ್ರದ ಮೇರೆ ಶ್ರೀಮತಿ ಬೀಬಿಯಮ್ಮನವರಿಂದ ರೆವಿನ್ಯೂ ಸ.ನಂ. 78/15

ಮುನಿಸಿಪಲ್ ಸ.ನಂ. 90/15 ರಂತೆ 0.06 ಎಕರೆ ಜಾಗವು ರೆವಿನ್ಯೂ ಖಾತೆ ಎಂ.ಸಿ. ನಂ:90/78-79ರಂತೆ ಮೇಲ್ಮನವಿದಾರರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ. ಅನಂತರ ಸದರಿ ಜಮೀನು ಕುಶಾಲನಗರ ಗ್ರಾಮ ಪಂಚಾಯಿತಿಯ ನೋಟಿಫೈಡ್ ಮುನಿಸಿಪಲ್ ಏರಿಯಾದ ವ್ಯಾಪ್ತಿಗೊಳಪಟ್ಟು ಮುಳ್ಳುಸೋಗೆ ಗ್ರಾಮ ಪಂಚಾಯಿತಿಯ ದಾಖಲೆಗಳಲ್ಲಿ ದಾಖಲಾಗಿದ್ದು, ಮೇಲ್ಮನವಿದಾರರು ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ವಗೈರೆಗಳನ್ನು ಪಾವತಿಸಿಕೊಂಡು ಬರುತ್ತಿರುವುದು ದಾಖಲೆಗಳಿಂದ ಕಂಡು ಬರುತ್ತದೆ.

1ನೇ ಪ್ರತಿವಾದಿಗಳು ತನಗೆ ತಹಶೀಲ್ದಾರರಿಂದ ಸದರಿ ಜಾಗ ಮಂಜೂರಾಗಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಒದಗಿಸಿರುವ ಮಂಜೂರಾಗಿದೆ ಎನ್ನಲಾದ ದಾಖಲೆಯನ್ನು ಪರಿಶೀಲಿಸಲಾಗಿ, ಇದು ತಹಶೀಲ್ದಾರರು ನೀಡಿರುವ ತಾತ್ಕಾಲಿಕ ಮಂಜೂರಾತಿ ಪತ್ರವಾಗಿದ್ದು, ಸದರಿ ಪತ್ರದಲ್ಲಿ ನಮೂದಿಸಿರುವ 6ನೇ ಷರತ್ತಿನಲ್ಲಿ "ಸರ್ವೆ ಮಾಡಿದ ನಂತರ ತಾತ್ಕಾಲಿಕ ಮಂಜೂರಾತಿ ಆಗಿರುವ ಸರ್ವೆ ನಂಬರ್‌ನ ಜಾಗವನ್ನು ಮಂಜೂರು ಮಾಡಲು ಈ ನಿಯಮಗಳಲ್ಲಿ ಕೆಳಗೆ ಸಹಿ ಮಾಡಿದವರಿಗೆ (ಮಂಜೂರು ಮಾಡಿದ ಅಧಿಕಾರಿಗೆ) ಅಧಿಕಾರ ಇಲ್ಲ ಅಥವಾ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಕಂಡುಬಂದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗಿದೆಯೆಂದು ಪರಿಗಣಿಸುವುದು" ಎಂಬುದಾಗಿ ನಮೂದಿಸಲಾಗಿರುತ್ತದೆ. ಅಂದರೆ ಈ ಮಂಜೂರಾತಿಯು ಅಧಿಕಾರವಿಲ್ಲದೇ ಮಾಡಿದಂತಹುದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ, ಇದು ತಾತ್ಕಾಲಿಕ ಮಂಜೂರಾತಿ ಎನ್ನಲಾಗಿದ್ದು, ಖಾಯಂ ಮಂಜೂರಾತಿಯಾದ ಬಗ್ಗೆ 1ನೇ ಪ್ರತಿವಾದಿಗಳು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಇದಲ್ಲದೇ, 1ನೇ ಪ್ರತಿವಾದಿಗಳಿಗೆ ಜಾಗ ಮಂಜೂರಾಗಿದೆ ಎನ್ನುವುದಕ್ಕೆ ಮೂಲ ಮಂಜೂರಾತಿ ಕಡತ ಲಭ್ಯವಿರುವುದಿಲ್ಲ ಎಂಬುದಾಗಿ ತಹಶೀಲ್ದಾರರು ಹಿಂಬರಹ ನೀಡಿರುತ್ತಾರೆ. ಆದ್ದರಿಂದ ಇದು ಅಧಿಕೃತ ಮಂಜೂರಾತಿಯಲ್ಲವೆಂಬುದು ದೃಢಪಡುತ್ತದೆ.

ದಾವಾ ಜಮೀನಿನ ಹಕ್ಕುದಾರಿಕೆ ಬಗ್ಗೆ ಈಗಾಗಲೇ ಸಿವಿಲ್ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದು ಇನ್ನೂ ಇತ್ಯರ್ಥಗೊಳ್ಳಬೇಕಾಗಿರುತ್ತದೆ. ವಾಸ್ತವಾಂಶಗಳು ಹೀಗಿರುವಾಗ 1ನೇ ಪ್ರತಿವಾದಿಗಳಿಗೆ ಸರ್ಕಾರಿ ಜಾಗ ಮಂಜೂರಾಗಿರುವುದಾಗಿ 3ನೇ ಪ್ರತಿವಾದಿಗಳು ಪ್ರಶ್ನಿತ ಆದೇಶದಲ್ಲಿ ಪ್ರಸ್ತಾಪಿಸಿರುವುದು ಆಧಾರ ರಹಿತವಾದುದಾಗಿದೆ. ಸದರಿ ಆದೇಶವು ಕಾನೂನಿನಡಿ ಊರ್ಜಿತವಾದುದಲ್ಲ. ಆದುದರಿಂದ ಪ್ರಕರಣದ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು 3ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವನ್ನು ಬದಿಗೊತ್ತಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:30-05-2016ರಂದು ಘೋಷಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.